

ಪೈಸೆಯೂ ನೀನು ಕೊಡುವುದು ಬೇಡ' ಎಂದರು.

ಹುಸೇನಿ ಕೈ ಮುಗಿದ. 'ಅದು ಆಗುವುದಿಲ್ಲ ಸ್ವಾಮಿ. ಕನಿಷ್ಠ ಒಂದು ಸಾವಿರವಾದರು ಇರಲಿ' ಎನ್ನುತ್ತಾ ಕುಪ್ಪಣ್ಣಯ್ಯ ನೀಡಿದ ಆ ಹಣವನ್ನು ಅವರಿಗೇ ಹಿಂದಿರುಗಿಸಲು ಮುಂದಾದ.

ಕುಪ್ಪಣ್ಣಯ್ಯ 'ದೇವರಾಣೆಗೂ ಬೇಡ,' ಎಂದವರೇ 'ನಿನ್ನ ಆಧಾರ ಕಾರ್ಡಿನಲ್ಲಿ ಇರುವ ಹೆಸರು ಮತ್ತು ವಿಳಾಸವನ್ನು ಮುಂದಿನ ಸಲ ಬರುವಾಗ ತಂದುಕೊಡು, ಯಾಕೆ ಎಂದು ಕೇಳಬೇಡ' ಎಂದರು.

'ಯಾಕೆ ಸ್ವಾಮಿ ಅದೆಲ್ಲ?' ಹುಸೇನಿ ಆಶ್ಚರ್ಯದಲ್ಲಿ ಪ್ರಶ್ನಿಸಿದ.

'ಅದೆಲ್ಲ ನಿನಗೆ ಯಾಕೆ?' ಎಂದು ಕುಪ್ಪಣ್ಣಯ್ಯ ಹುಸೇನಿಯ ಬಾಯಿ ಮುಚ್ಚಿಸಿದರು.

ವಾರದ ಮೇಲೆ ಹುಸೇನಿ ಕುಪ್ಪಣ್ಣಯ್ಯನವರ ಮನೆಯ ಹಿಂದಿನ ಕರಿಬೇವಿನ ಸೊಪ್ಪನ್ನು ಕೊಂಡು ಹೋಗಲು ಕುಪ್ಪಣ್ಣಯ್ಯನವರನ್ನು ಅವರ ಹೋಟೆಲಿನಲ್ಲಿ - ಭೇಟಿಯಾದ. 'ನಾನೇ ಬರುತ್ತೇನೆ ಮಾರಾಯ ನಿನ್ನ ಜೊತೆ ಈಗ ನನ್ನ ಮನೆಗೆ' ಎಂದವರೇ.' 'ನೀನು ನಿನ್ನ ಸೈಕಲಿನಲ್ಲಿ ಎರಡುಗೋಣಿ ಕರಿಬೇವಿನ ಸೊಪ್ಪು ಕೊಂಡು ಹೋಗುವುದು ಬೇಡ. ಇಲ್ಲಿ ನಾಲ್ಕಾರು ರಿಕ್ಷಾದವರು ಇದ್ದಾರೆ. ಅವರೆಲ್ಲ ನನ್ನ ಬಗ್ಗೆ ಗೌರವ ಇಟ್ಟುಕೊಂಡಿದ್ದಾರೆ. ಅವರಲ್ಲಿ ನಿನ್ನನ್ನೂ ನಿನ್ನ ಸ್ವತ್ತನ್ನೂ ಒಟ್ಟಿಗೆ ಕಳುಹಿಸುತ್ತೇನೆ' ಎಂದು ಹುಸೇನಿಯಿಂದ ಅವನ ಆಧಾರಕಾರ್ಡು ತೆಗೆದುಕೊಂಡು ತನ್ನ ಸ್ಮಾರ್ಟ್ ಫೋನಿನಲ್ಲಿ ಫೋಟೋ ಹೊಡೆದು, 'ನಡಿಯಿರಿ' ಎಂದು ಹುಸೇನಿಯನ್ನು ತನ್ನ ಮನೆಗೆ ರಿಕ್ಷಾದಲ್ಲಿ ಕರೆದೊಯ್ದರು.

ಹುಸೇನಿ ಕರಿಬೇವಿನ ಸೊಪ್ಪು ತುಂಬಿಕೊಳ್ಳಲು ಎರಡು ಗೋಣಿ ತಂದಿದ್ದ. ಕುಪ್ಪಣ್ಣಯ್ಯ ಮನೆಯಲ್ಲಿದ್ದ ಎರಡು ಗೋಣಿಯನ್ನೂ ಅವನಿಗೆ ನೀಡಿ ಒಟ್ಟು ನಾಲ್ಕೂ ಗೋಣಿ ತುಂಬ ಕರಿಬೇವಿನ ಸೊಪ್ಪನ್ನು ಅವನನ್ನೂ ರಿಕ್ಷಾದಲ್ಲಿ ಕಾರ್ಕಳಕ್ಕೆ ಕಳುಹಿಸಿದರು. 'ನಾಳೆ ಬಂದು